# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

ನಂ.ನಅಪ್ರಾತು/ಯೋ/ಏಕ ನಿವೇಶನ/32/ನಕ್ಷೆ ದೃಢೀಕರಣ/2013-14 ದಿನಾಂಕ : 19-3-2014

2798

## ಏಕ ನಿವೇಶನ ವಿನ್ಯಾಸ ಮಂಜೂರಾತಿ ಆದೇಶ

ವಿಷಯ : ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಬೆಳಗುಂಬ ಗ್ರಾಮದ ಸರ್ವೆ ನಂಬರ್ **24/1ಬಿ15** ರಲ್ಲಿ ವಿಸ್ತೀರ್ಣ **12.50X16.19 ಮೀಟರ್** ಪ್ರದೇಶಕ್ಕೆ **ಶ್ರೀ ಎಸ್.ಆರ್.ನಾರಾಯಣಪ್ಪ** ಇವರ ಪರವಾಗಿ **ವಾಸದ** ಉಪಯೋಗಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ :
1. ಅರ್ಜಿದಾರರ ಅರ್ಜಿ ದಿನಾಂಕ **08-08-2013.**
2. ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶ ಸಂಖ್ಯೆ **ಎಎಲ್ಎನ್(ಟಿಎಂಕೆ)/ಸಿಆರ್/ 261/2012-13 ದಿನಾಂಕ 22-06-2013**
3. ದಿನಾಂಕ **06-02-2014** ರಂದು ನಿಗಧಿಪಡಿಸಿ ದಿನಾಂಕ **22-02-2014** ರಂದು ಮುಂದುವರೆದ ಸಭೆಯ ವಿಷಯ ಸಂಖ್ಯೆ **57** ರ ನಿರ್ಣಯ.
4. ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಕೆರೆ ಅಭಿವೃದ್ಧಿ ಶುಲ್ಕ, ಸ್ಲಂಸೆಸ್ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕ ಪಾವತಿಸಿದ ದಿನಾಂಕ **05-03-2014** ರಸೀತಿ ಸಂಖ್ಯೆ **31705 ರೂ.36,575-00** (ಮೂವತ್ತಾರು ಸಾವಿರದ ಐದು ನೂರ ಎಪ್ಪತ್ತೈದು ರೂಪಾಯಿಗಳು ಮಾತ್ರ)

* * * * *

ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ (1) ರ ತಮ್ಮ ಕೋರಿಕೆಯ ಮೇರೆಗೆ ಉಲ್ಲೇಖ (3) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, **ಬೆಳಗುಂಬ** ಗ್ರಾಮದ ಸರ್ವೆ ನಂಬರ್ **24/1ಬಿ15** ರಲ್ಲಿ ವಿಸ್ತೀರ್ಣ **12.50X16.19 ಮೀಟರ್** ಪ್ರದೇಶಕ್ಕೆ **ವಾಸದ** ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಉಲ್ಲೇಖ (4) ರಲ್ಲಿ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು **ಶ್ರೀ ಎಸ್.ಆರ್.ನಾರಾಯಣಪ್ಪ** ಇವರ ಪರವಾಗಿ **ವಾಸದ** ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದಿಸಲಾಗಿದೆ.

### ಷರತ್ತುಗಳು:-

1. ಪ್ರಸ್ತಾವಿತ ಪ್ರದೇಶವನ್ನು **ವಾಸದ** ಉದ್ದೇಶದ ಏಕ ನಿವೇಶನ ವಿನ್ಯಾಸವಾಗಿ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಾಗ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1991 ರ ಕಲಂ 17 ರಂತೆ ಈ ಕಛೇರಿಯ ಪೂರ್ವಾನುಮತಿ ಪಡೆಯತಕ್ಕದ್ದು.
2. ಕಟ್ಟಡ ಇತ್ಯಾದಿ ಕಾಮಗಾರಿಯನ್ನು ಕೈಗೊಳ್ಳುವ ಮುನ್ನಾ ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕ್ರಮ ಬದ್ಧ ಪರವಾನಗಿ (ಲೈಸೆನ್ಸ್) ಯನ್ನು ಪಡೆಯತಕ್ಕದ್ದು.
3. ಸಿವಿಲ್ ವ್ಯಾಜ್ಯಗಳಿಗೆ, ತಪ್ಪು ಮಾಹಿತಿ / ದಾಖಲೆಗಳಿಗೆ ಪ್ರಾಧಿಕಾರವು ಜಾವಾಬ್ದಾರಿಯಲ್ಲ.
4. ರಸ್ತೆಯು ಮಂಜೂರಾಗಿರುವ ಪ್ರಕಾರ ಕನಿಷ್ಠ **9** ಮೀಟರ್ ಅಗಲವಿರುವಂತೆ ನೋಡಿಕೊಳ್ಳಬೇಕು. ಆದುದರಿಂದ ರಸ್ತೆ ಮದ್ಯದಿಂದ **4.5** ಮೀಟರ್ ಅಗಲದ ನಂತರ ಕಾಂಪೌಡ್ ಕಟ್ಟಬೇಕು.
5. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
6. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
7. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾಂತಾನೆ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು.
8. ಸದರಿ ವಿನ್ಯಾಸದಲ್ಲಿನ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಾಗಲಿ ಅಥವಾ ಈ ಅನುಮೋದನೆ ಸಂಬಂಧ ನೀಡಲಾದ ದಾಖಲಾತಿ / ಮಾಹಿತಿ ತಪ್ಪು ಎಂದು ಕಂಡು ಬಂದಲ್ಲಿ ಈಗ ನೀಡಲಾದ ಅನುಮತಿಯು ತಾನೇ ತಾನಾಗಿ ರದ್ದಾಗುತ್ತದೆ ಎಂದು ಭಾವಿಸತಕ್ಕದ್ದು.

19/3/2014
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು. 19/3

ಶ್ರೀ ಎಸ್.ಆರ್.ನಾರಾಯಣಪ್ಪ
ಬಿನ್ ಲೇ॥ ರುದ್ರಯ್ಯ
ಕುಂದೂರು ಕ್ರಾಸ್,
ಬೆಳಗುಂಬ ರಸ್ತೆ,
ತುಮಕೂರು

**ಪ್ರತಿಯನ್ನು :-**
ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಬೆಳಗುಂಬ ಗ್ರಾಮ ಪಂಚಾಯ್ತಿ, ಬೆಳಗುಂಬ ರವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.




SCALE 1:200




Key Map

## AREA STATEMENT

AREA-0 ACRES 2 GUNTAS.

## LAND USE ANALYSIS

1. RESIDENTIAL: 202.41 Sqm

GOVERNMENT OF KARNATAKA
TUMKUR URBAN DEVELOPMENT AUTHORITY
TUMKUR

TOWN PLANNING MEMBER
T.U.D.A
TUMKUR

COMMISSIONER
T.U.D.A
TUMKUR

APPROVED RESIDENTIAL LAY OUT
PLAN IN SY.NO.24/1B15 OF BELAGUMBAVILLAGE,
TUMKUR

**OWNER:** SRI. S.R.NARAYANAPPA